ದಿನಾಂಕಃ 18-08-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟಿ ಸವಾಲುಃ–</u>** ವಾದಿ ಪರ ಶ್ರೀ ಪಿ ಆರ ಕೆ ವಕೀಲರಿಂದ

ನಾನು 10 ನೇ ತರಗತಿವರೆಗೆ ವ್ಯಾಸಂಗ ಮಾಡಿರುತ್ತೇನೆ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ನಮ್ಮ ತಂದೆಯಿಂದ ಬಂದಂತಹ ಆಸ್ತಿಗಳು. ದಾವಾ ಆಸ್ತಿಗಳು ನಮ್ಮ ತಂದೆಗೆ ಅವರ ತಂದೆಯಿಂದ ಬಂದಿದ್ದವು ಎಂದರೆ ಸರಿ. ನನ್ನ ಅಜ್ಜನಾದ ಅಡಿವೆಪ್ಪನಿಗೆ ನಾಲ್ಕು ಜನ ಮಕ್ಕಳು ಎಂದರೆ ಸರಿ. ಅಡಿವೆಪ್ಪನ ನಾಲ್ಕು ಜನ ಮಕ್ಕಳ ಹೆಸರು ಸಿದ್ದಪ್ಪ, ಹನುಮಂತಪ್ಪ, ಮಲ್ಲಪ್ಪ ಹಾಗೂ ನೀಲಪ್ಪ ಎಂದರೆ ಸರಿ. ಇವರನ್ನು ಹೊರತುಪಡಿಸಿ ಅಡಿವೆಪ್ಪನಿಗೆ ಬೇರೆ ಮಕ್ಕಳು ಇಲ್ಲ. ಸಿದ್ದಪ್ಪನಿಗೆ ಮೂರು ಜನ ಗಂಡು ಮಕ್ಕಳು ಹಾಗೂ ಒಬ್ಬಳು ಹೆಣ್ಣು ಮಗಳು. ಅವರ ಹೆಸರು ಯಲ್ಲಪ್ಪ, ಪಕ್ಕೀರಪ್ಪ, ನಾಗವ್ವ ಮತ್ತು ಮಹದೇವಪ್ಪ ಎಂದರೆ ಸರಿ. ಯಲ್ಲಪ್ಪನಿಗೆ ಗುಡ್ಡಪ್ಪ ಒಬ್ಬನೇ ಮಗ ಎಂದರೆ ಸರಿ. ಪಕ್ಕೀರಪ್ಪನಿಗೆ ಇಬ್ಬರು ಹೆಂಡತಿಯರಿದ್ದು ಹನುಮವ್ವನಿಂದ ನಿಂಗಪ್ಪ ಮತ್ತು ಪುಟ್ಟಪ್ಪ ಎಂಬ ಇಬ್ಬರು ಮಕ್ಕಳು ಹಾಗೂ ಪುಟ್ಟವ್ವಳಿಂದ ಹನುಮಕ್ಕ ಮತ್ತು ಸಿದ್ದಪ್ಪ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ನಾಗವ್ವಳಿಗೆ ಗುಡ್ಡಪ್ಪ, ಮುತ್ತಣ್ಣ, ಅಕ್ಕಮ್ಮ ಮತ್ತು ಶಿವಪುತ್ರಪ್ಪ ಎಂಬ ನಾಲ್ಕು ಜನ ಮಕ್ಕಳು ಎಂದರೆ ಸರಿ. ಮಹದೇವಪ್ಪನಿಗೆ ಹಿರಿಯಕ್ಕ, ಬಸಪ್ಪ ಮತ್ತು ಹನುಮಕ್ಕ ಎಂಬ ಮೂರು ಜನ ಮಕ್ಕಳು ಎಂದರೆ ಸರಿ. ಹಿರಿಯಕ್ಕನಿಗೆ ಅನಿತಾ ಎಂಬ ಮಗಳು ಎಂದರೆ ಸರಿ.

ನಮ್ಮ ಕುಟುಂಬದಲ್ಲಿ ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಇವತ್ತಿನವರೆಗೂ ನೊಂದಾಯಿತ ವಿಭಾಗ ಪತ್ರದ ಮುಖಾಂತರ ಅಥವಾ ನ್ಯಾಯಾಲಯದ ಡಿಕ್ರಿ ಮುಖಾಂತರ ವಿಭಾಗ ಆಗಿಲ್ಲ ಎಂದರೆ ಸರಿ. ನಮ್ಮ ಕುಟುಂಬದಲ್ಲಿ 1992 ರಲ್ಲಿ ವಿಭಾಗ ಆಗಿರುತ್ತದೆ ದಿನಾಂಕ ಮತ್ತು ತಿಂಗಳು ನನಗೆ ನೆನಪಿಲ್ಲ. ಸದರಿ ವಿಭಾಗದಲ್ಲಿ ಗುಡ್ಡಪ್ಪನಿಗೆ 7 ಎಕರೆ ಜಮೀನು ಕೊಡಲಾಗಿದೆ. ಪಕ್ಕೀರಪ್ಪನಿಗೆ ರಿ ಸ ಸಂಖ್ಯೆ 63/1 ರಲ್ಲಿ 3 ಎಕರೆ 12 ಗುಂಟೆ, ರಿ ಸ ಸಂಖ್ಯೆ 152/2 ರಲ್ಲಿ 5 ಎಕರೆ, ರಿ ಸ ಸಂಖ್ಯೆ 158 ಮತ್ತು 159 ರಲ್ಲಿ 3 ಎಕರೆ 15 ಗುಂಟೆ ಜಮೀನು ಕೊಡಲಾಗಿದೆ. ರಿ ಸ ಸಂಖ್ಯೆ 158 ಮತ್ತು 159 ರಲ್ಲಿ ವಿಭಾಗ ಆಗಿಲ್ಲ ಆದರೆ 3 ಎಕರೆ 15 ಗುಂಟೆ ಜಮೀನು ಉಪಯೋಗ ಮಾಡಲಿಕ್ಕೆ ಪಕ್ಕೀರಪ್ಪನಿಗೆ ಕೊಡಲಾಗಿದೆ. ನಮ್ಮ ಪಿತ್ರಾರ್ಜಿತ ಆಸ್ತಿಗಳನ್ನು ಇವತ್ತಿನವರೆಗೂ ಅಪಸಾತನಲ್ಲಿ ವಹಿವಾಟ ಮಾಡುತ್ತಿದ್ದೇವೆ ಎಂದರೆ ಎಲ್ಲರೂ ಹಂಚಿಕೆ ಮಾಡಿಕೊಂಡು ವಹಿವಾಟ ಮಾಡುತ್ತಿದ್ದೇವೆ. ಹಂಚಿಕೆ ಪ್ರಕಾರ ಇವತ್ತಿನವರೆಗೂ ಖಾತೆ ಆಗಿಲ್ಲ ಎಂದರೆ ರಿ ಸ ಸಂಖ್ಯೆ 158 ಮತ್ತು 159 ರ ಆಸ್ತಿಯ ಪ್ರತ್ಯೇಕ ಖಾತೆ ಆಗಿಲ್ಲ. ದಾವಾ ಆಸ್ತಿಗಳಲ್ಲಿ ಇವತ್ತಿನವರೆಗೂ ಸರಿಸಮಾನ ಹಿಸ್ಸೆ ಆಗಿಲ್ಲ ಎಂದರೆ ಸರಿಯಲ್ಲ. ಖಾತೆ ಮಾಡಿಕೊಂಡಿರುವ ಬಗ್ಗೆ ನೊಂದಾಯಿತ ದಾಖಲೆ ಇಲ್ಲ ಎಂದರೆ ಸರಿ, ಆದರೆ ಡ ಇದೆ.

ವಾದಿಯರಿಗೆ ಹಿಸ್ಸೆ ಕೊಡಬಾರದು ಎಂಬ ಉದ್ದೇಶದಿಂದ ಖೊಟ್ಟಿ ಖಾತೆ ದಾಖಲೆ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ವಾದಿಯರಿಗೆ ಹಿಸ್ಸೆ ಕೊಡಬಾರದು ಎಂಬ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಅಡಿವೆಪ್ಪನ ಮಗನಾದ ಹನುಮಂತಪ್ಪನಿಗೆ ಆರು ಜನ ಮಕ್ಕಳು ಎಂದರೆ ಸರಿ. ಅವರ ಪೈಕಿ ಮಲ್ಲಪ್ಪ ಮತ್ತು ದೇವಕ್ಕ ಮೃತಪಟ್ಟಿದ್ದಾರೆ ಎಂದರೆ ಸಾಕ್ಷಿಯು ಪಕ್ಕಿರೇಶಪ್ಪನನ್ನು ಹೊರತುಪಡಿಸಿ ಉಳಿದ ಐದು ಜನ ಮೃತಪಟ್ಟಿದ್ದಾರೆ ಎಂದು ನುಡಿದಿದ್ದಾರೆ. ಮೃತ ಮಲ್ಲಪ್ಪನಿಗೆ ಐದು ಜನ ಮಕ್ಕಳು ಎಂದರೆ ಸರಿ. ದೇವಕ್ಕನಿಗೆ ನಾಲ್ಕು ಜನ ಮಕ್ಕಳು ಎಂದರೆ ಆರು ಜನ ಮಕ್ಕಳು. ಅವರ ಹೆಸರು ಕರೆಯಲ್ಲಪ್ಪ, ಶೇಖಪ್ಪ, ರತ್ನವ್ವ, ಪರಮೇಶ, ಯಲ್ಲಮ್ಮ ಮತ್ತು ಶಾಂತಮ್ಮ. ಯಲ್ಲಮ್ಮನ ಮದುವೆ ಮಾಡಿ ನೆಗಳೂರ ಗ್ರಾಮಕ್ಕೆ ಕೊಡಲಾಗಿದೆ. ಅಡಿವೆಪ್ಪನ ಮಗನಾದ ಮಲ್ಲಪ್ಪನಿಗೆ ಲಕ್ಷ್ಮಣ ಒಬ್ಬನೇ ಮಗ ಎಂದರೆ ಸರಿ. ಅಡಿವೆಪ್ಪನ ಮಗನಾದ ನೀಲಪ್ಪನಿಗೆ ಸಣ್ಣನಿಂಗಪ್ಪ ಮತ್ತು ದೇವೆಂದ್ರಪ್ಪ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ಅಡಿವೆಪ್ಪನ ಆಸ್ತಿಗಳಲ್ಲಿ ಅವನ ವಾರಸುದಾರರ ನಡುವೆ ಸರಿಸಮನಾದ ಹಿಸ್ಸೆ ಆಗಿಲ್ಲ ಎಂದರೆ ಸರಿಯಲ್ಲ. ಸರಿಸಮಾನವಾದ ಹಿಸ್ಸೆ ಆದ ಬಗ್ಗೆ ದಾಖಲೆ ಆಗಿಲ್ಲ ಎಂದರೆ ಸರಿ. ಸರಿಸಮಾನ ಹಿಸ್ಸೆ ದಾಖಲೆ ಮಾಡಿಕೊಡಲು ವಾದಿಯರು ಕೇಳಿದಾಗ ನಾನು ಇನಕಾರ್ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಇವತ್ತಿನವರೆಗೂ ವಾದಿಯರಿಗೆ ಹಿಸ್ಸೆ ಕೊಡದಿದ್ದರೂ ಸಹ ಸರಿಸಮಾನ ಹಿಸ್ಸೆ ಆಗಿದೆ

ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ)